**ದಿನಾಂಕಃ 24-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: 1 ನೇ ಎದುರುದಾರರ ಪರ ಶ್ರೀ ಎಂ.ಎಂ.ಎಲ್ ವಕೀಲರಿಂದಃ**

ನನ್ನ ಮಾಲೀಕತ್ವದ ಹಿರೊಂ ಹೊಂಡಾ ಮೋಟಾರ್ ಸೈಕಲ್ ನಂ.ಕೆಎ.17/ಹೆಚ್.ಇ-1805 ಗೆ ಸಂಬಂಧಿಸಿದ ಆರ್.ಸಿ. ಕಾರ್ಡ ನ ನೋಟರಾಜ್ಡ ಪ್ರತಿಯ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು.

ಅಪಘಾತದ ಸಮಯದಲ್ಲಿ ನನ್ನ ಮಾಲೀಕತ್ವದ ವಾಹನವನ್ನು ಪರಶುರಾಮ ದುರಗಪ್ಪ ರವರು ಚಾಲನೆ ಮಾಡುತ್ತಿದ್ದರು ಸದರಿಯವರ ಬಳಿ ಡಿ.ಎಲ್ ಇತ್ತು ಎಂದು ತೋರಿಸಲು ದಾವಣಗೆರೆಯ ಎ.ಆರ್.ಟಿ.ಓ ಕಚೇರಿಯವರು ನೀಡಿರುವ ಡಿ.ಎಲ್ ನ ನೋಟರಾಜ್ಡ ಪ್ರತಿಯ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಆರ್-2 ಎಂದು ಗುರುತಿಸಲಾಯಿತು.

ಭಾರತ ಸರ್ಕಾರದವರು ನೀಡಿರುವ ನನ್ನ ವಿಶಿಷ್ಟ ಗುರುತಿನ ಚೀಟಿಯ ನೋಟರಾಜ್ಡ ಪ್ರತಿಯ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಆರ್-3 ಎಂದು ಗುರುತಿಸಲಾಯಿತು.

ನನ್ನ ವಿರುದ್ದ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

<u>**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಸಿ.ಬಿ. ವಕೀಲರಿಂದಃ**</u>

ನಾನು ಶಾಲೆಗೆ ಹೋಗಿರುವುದಿಲ್ಲ .ನಾನು ಅನಕ್ಷರಸ್ಥನಾಗಿದ್ದೇನೆ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ . ನನ್ನ ಮಾಲೀಕತ್ವದ ಹಿರೋ ಹೊಂಡಾ ಮೋಟಾರ್ ಸೈಕಲ್ ನಂ.ಕೆಎ.17/ಹೆಚ್.ಇ-1805 ರ ವಾಹನವನ್ನು ಪರಶುರಾಮ ರವರಿಗೆ ಚಾಲನೆ ಮಾಡಲು ಕೊಟ್ಟಿದ್ದೆ. ಸದರಿ ಪರಶುರಾಮ ರವರಿಗೆ ಮೋಟಾರ್ ಸೈಕಲ್ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು . ಸದರಿ ಮೋಟಾರ್ ಸೈಕಲ್ ನ್ನು ನಾನು 2019 ರಲ್ಲಿ ಖರೀದಿ ಮಾಡಿದ್ದೇನೆ . ಶೋರೂಮ್ ನಲ್ಲಿಯೇ ಸದರಿ ನನ್ನ ವಾಹನಕ್ಕೆ 5 ವರ್ಷಗಳ ಇನ್ಸೂರನ್ಸ ಪಾಲಿಸಿ ಮಾಡಿಸಿದ್ದೇನೆ .

ಸದರಿ ಇನ್ಸೂರನ್ಸ ಪಾಲಿಸಿ ಯಾವ ತರಹದ ಪಾಲಿಸಿ ಆಗಿದೆ ಎನ್ನುವುದನ್ನು ನನಗೆ ಹೇಳಲು ಬರುವುದಿಲ್ಲ . ಸದರಿ ಪಾಲಿಸಿಯ ಯಾವ ದಿನಾಂಕ ಮತ್ತು ವರ್ಷದಿಂದ ಯಾವ ದಿನಾಂಕ ಮತ್ತು ವರ್ಷದವರೆಗೆ ಚಾಲ್ತಿಯಲ್ಲಿತ್ತು ಎನ್ನುವುದನ್ನು ನನಗೆ ಹೇಳಲು ಬರುವುದಿಲ್ಲ . ಇನ್ಸೂರನ್ಸ ಕಂಪನಿಯವರು ನನಗೆ ಯಾವುದೇ ನೋಟಿಸ್ ನ್ನು ಕೊಟ್ಟಿರುವುದಿಲ್ಲ . ಸದರಿ ವಾಹನವನ್ನು ಖರೀದಿ ಮಾಡಿದ ಒಂದು ವರ್ಷದ ನಂತರ ಇನ್ಸೂರನ್ಸ ಕಂಪನಿಯವರು ಫೋನ್ ಮುಖಾಂತರವಾಗಲೀ ಅಥವಾ ಸ್ವತಃ ಬಂದು ಸದರಿ ಇನ್ಸೂರನ್ಸ ಪಾಲಿಸಿಯನ್ನು ರಿನ್ಯೂ ಮಾಡಿಕೊಳ್ಳಿ ಎಂದು ತಿಳಿಸಿರುವುದಿಲ್ಲ . ಅಪಘಾತದ ನಂತರ ನಾನು ಪೋಲಿಸ್ ಠಾಣೆಗೆ ಹಾಜರಾಗಿ ಮುಚ್ಚಳಿಕೆ ಪತ್ರ ಬರೆದು ಕೊಟ್ಟು ನನ್ನ ವಾಹನವನ್ನು ಬಿಡುಗಡೆ ಮಾಡಿಸಿ ಕೊಂಡಿದ್ದೇನೆ. ಸದರಿ ನನ್ನ ಮಾಲೀಕತ್ವದ ವಾಹನವನ್ನು ಚಾಲನೆ ಮಾಡುತ್ತಿದ್ದ ಚಾಲಕ ಅತೀ ವೇಗವಾಗಿ ಚಾಲನೆ ಮಾಡುತ್ತಿದ್ದ ಸಮಯದಲ್ಲಿ ಯಾರಿಗೋ ಅಪಪಘಾತ ಪಡಿಸಿದ್ದಾನೆ ಎನ್ನುವ ಮಾಹಿತಿ ನನಗೆ ನಂತರ ಗೊತ್ತಾಗಿರುತ್ತದೆ . ಸದರಿ ಅಪಘಾತ ನನ್ನ ಮಾಲೀಕತ್ವದ ವಾಹನದ ಚಾಲಕನ ತಪ್ಪಿನಿಂದ ಆಗಿರುವ ಕಾರಣಕ್ಕಾಗಿ ನಾನೇ ಅರ್ಜಿದಾರರಿಗೆ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿದ್ದೇನೆ

ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನ್ನ ಮಾಲೀಕತ್ವದ ಮೋಟಾರ್ ಸೈಕಲ್ ನ ಹಿಂಬದಿ ಸವಾರನೆಂದು ಪ್ರಯಾಣಿಸುತ್ತಿದ್ದ ಸಮಯದಲ್ಲಿ ಸದರಿ ನನ್ನ ಮಾಲೀಕತ್ವದ ವಾಹನದ ಚಾಲಕನ ತಪ್ಪಿನಿಂದ ಸದರಿ ಅಪಘಾತ ಉಂಟಾಗಿರುವ ಕಾರಣಕ್ಕಾಗಿ ನಾನೇ ಅರ್ಜಿದಾರರಿಗೆ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ. ವಕೀಲರಿಂದಃ**

ಸದರಿ ಅಪಘಾತದ ವಿಷಯ ನನಗೆ ಪ್ರಪ್ರಥಮವಾಗಿ ಯಾವ ತಾರೀಖು , ತಿಂಗಳು ಮತ್ತು ಇಸವಿಯಂದು ಗೊತ್ತಾಯಿತು ಎಂದು ನನಗೆ ಈಗ ನೆನಪಿಲ್ಲ . ಸದರಿ ಅಪಘಾತದಲ್ಲಿ ಒಬ್ಬ ವ್ಯಕ್ತಿ ಮರಣ ಹೊಂದಿದ್ದಾನೆ ಎನ್ನುವ ವಿಷಯವನ್ನು ನಾನು 2 ನೇ ಎದುರುದಾರರಿಗೆ ತಿಳಿಸಿರುವುದಿಲ್ಲ ಮತ್ತು ಕ್ಲೇಮ್ ಫಾರಂ ನ್ನು ಸಹ ಭರ್ತಿ ಮಾಡಿ ಕೊಟ್ಟಿರುವುದಿಲ್ಲ. ಸದರಿ ಅಪಘಾತವಾದ ನಂತರ ಅಪಘಾತದ ವಿಷಯ ಅಂದರೆ ತಾರೀಖು , ತಿಂಗಳು , ಇಸವಿ, ಅಪಘಾತದ ಸ್ಥಳ , ಅಪಘಾತದ ಸಮಯ ಮತ್ತು ಅಪಘಾಕ್ಕಿಡಾದ ವಾಹನದ ವಿವರ ಹಾಗು ಅಪಘಾತದಲ್ಲಿ ಮರಣಹೊಂದಿದ ಅಥವಾ ಗಾಯಗೊಂಡ ವ್ಯಕ್ತಿಗಳ ಬಗ್ಗೆ

ಕ್ಲೇಮ್ ಫಾರಂನ್ನು ಭರ್ತಿ ಮಾಡಿ ಇನ್ಸೂರನ್ಸ ಪಾಲಿಸಿಯೊಂದಿಗೆ 2 ನೇ ಎದುರುದಾರರಿಗೆ ತಿಳಿಸುವುದು ನನ್ನ ಜವಾಬ್ದಾರಿಯಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ .

ಪೋಲಿಸ್ ದಾಖಲೆಗಳ ಪ್ರಕಾರ ಮತ್ತು ಅರ್ಜಿದಾರರು ನ್ಯಾಯಾಯಕ್ಕೆ ಸಲ್ಲಿಸಿರುವ ದಾಖಲೆಗಳ ಪ್ರಕಾರ ದಿಃ 09-12-2020 ರಂದು ಸದರಿ ಅಪಘಾತ ಉಂಟಾಗಿರುತ್ತದೆ ಎನ್ನುವ ಬಗ್ಗೆ ನನಗೆ ನೆನಪಿಲ್ಲ. ಮೃತ ರಾಜು ನನ್ನ ಮಾಲೀಕತ್ವದ ಹೊಂಡಾ ಸಿ.ಬಿ.ಶೈನ್ ಮೋಟಾರ್ ಸೈಕಲ್ ಕೆಎ.17/ಹೆಚ್.ಇ-1805 ರ ಹಿಂಬದಿ ಸವಾರನಾಗಿದ್ದ ಎಂದರೆ ಸರಿ. ಸದರಿ ನನ್ನ ಮಾಲೀಕತ್ವದ ವಾಹನದಲ್ಲಿ ಸದರಿ ಮೃತ ರಾಜುನೊಂದಿಗೆ ರಮೇಶ ಗುರುಸಿದ್ದಪ್ಪ ಸಾಃ ಸಿದ್ದನೂರು ಗ್ರಾಮ ರವರೂ ಸಹ ಹಿಂಬದಿ ಸವಾರನಾಗಿದ್ದ ಎಂದರೆ ಸರಿ ಸಾಕ್ಷಿ ನಂತರ ಸದರಿ ರಮೇಶ ಗುರುಸಿದ್ದಪ್ಪ ಸಾಃ ಸಿದ್ದನೂರು ಗ್ರಾಮ ರವರಿಗೆ ನನ್ನ ಮಾಲೀಕತ್ವದ ವಾಹನದ ಚಾಲಕ ಗುದ್ದಿರುತ್ತಾನೆ ಎಂದು ನುಡಿಯುತ್ತಾನೆ. ದಿಃ 13-01-2023 ರಂದು 2 ನೇ ಎದುರುದಾರ ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುವ ತಕರಾರಿನ

ಬಗ್ಗೆ ನನ್ನ ವಕೀಲರ ಮುಖಾಂತರ ನಾನು ಕೇಳಿ ತಿಳಿದು ಕೊಂಡಿರುವುದಿಲ್ಲ. 2 ನೇ ಎದುರುದಾರ ನ್ಯಾಯಾಲಯಕ್ಕೆ ಅರ್ಜಿದಾರರ ಅರ್ಜಿಗೆ ಯಾವ ತಕರಾರನ್ನು ಸಲ್ಲಿಸಿದ್ದಾರೆ ಎನ್ನುವ ವಿಷಯವನ್ನು ನಾನು ನನ್ನ ವಕೀಲರ ಮುಖಾಂತರ ಕೇಳಿ ತಿಳಿದು ಕೊಂಡು ನ್ಯಾಯಾಲಯಕ್ಕೆ ನಿನ್ನೆಯ ದಿನ ಮತ್ತು ಈ ದಿನ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. 2 ನೇ ಎದುರುದಾರ ನನ್ನ ಮಾಲೀಕತ್ವದ ವಾಹನಕ್ಕೆ ದಿಃ 22-10-2019 ರಿಂದ ದಿಃ 21-10-2020 ರವರೆಗೆ Package Policy ಯನ್ನು ಮತ್ತು ನಂತರ ನಾಲ್ಕು ವರ್ಷಗಳಿಗೋಸ್ಕರ 3rd Party Policy ನ್ನು ನೀಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಐದು ವರ್ಷದವರೆಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ . 2 ನೇ ಎದುರುದಾರ ನನಗೆ ನೀಡಿರುವ Original Policy ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . Original Policy ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ

ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾರೆ . ದಿಃ 09-12-2020 ರಂದು ಅಪಘಾತದ ಸಮಯದಲ್ಲಿ 2 ನೇ ಎದುರುದಾರ ನೀಡಿರುವ Comprehensive Policy ಚಾಲ್ತಿ ಇರಲಿಲ್ಲ ಹಾಗು ದಿಃ 21-10-2020 ರಂದೇ ಸದರಿ Comprehensive Policy ಯು Expire ಆಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾರೆ . ದಿಃ 22-10-2020 ರಿಂದ ದಿಃ 21-10-2024 ರವರೆಗೆ 2 ನೇ ಎದುರುದಾರ ನನ್ನ ವಾಹನಕ್ಕೆ 3rd Party ಪಾಲಿಸಿಯನ್ನು ನೀಡಿದ್ದರು ಅದು ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ಮಾಲೀಕತ್ವದ ವಾಹನದ ಹಿಂಬದಿ ಸವಾರರಾಗಿದ್ದ ರಾಜು ಮತ್ತು ರಮೇಶ ರವರಿಗೆ 2 ನೇ ಎದುರುದಾರ ಯಾವುದೇ ಪರಿಹಾರ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಮೊತ್ತವನ್ನು ನಾನು ಸದರಿ ವಾಹನದ ಮಾಲೀಕನಾಗಿರುವ ಕಾರಣಕ್ಕಾಗಿ ನೀಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.